**ಕವಿತೆ**



# ಬೆಳಕಿನ ಕರುಣೆ

ಒಲಿಸಿಕೊಳ್ಳುವುದೆಂದರೆ...
ಇಳಿಸಿಕೊಳ್ಳುವುದು.
ಬಿಡಿ, ಇದು ತಿಳಿಹೇಳಿ ಮುಗಿಸುವಂತಹದ್ದೂ
ಅಲ್ಲ
ಬಿಡಿಸಿ ಅರ್ಥೈಸುವಂತಹದ್ದೂ
ಅಲ್ಲ.

ಧ್ಯಾನ ಹರಿತವಾಗಿದ್ದರೆ
ಗರ್ಭಗುಡಿ ತೆರೆಯದೆಯೂ
ದೇವರು ಕಾಣಿಸಿಕೊಳ್ಳಬಲ್ಲ
ಎದೆಯೊಳಗೇ ಬಂದು ಕೂರಬಲ್ಲ

***

ನೇಕೆಯ ಮೇಲೆ ನೀರಿಳಿಯುವ
ಹಸಿ ಬಟ್ಟೆ
ನೂಲಿನೊಳಗೆ ಉರಿಯ ಬಂಧಿಸುತ್ತಿದೆ
ಸೂರ್ಯ ಈಗ ಒಳಕೋಣೆಯಲ್ಲಿ
ವಿಶ್ರಮಿಸಿಕೊಳ್ಳುತ್ತಿದ್ದಾನೆ

ಅವಿತುಕೊಳ್ಳಲು ಭಿನ್ನವಿಸಿದಷ್ಟೂ
ಎಲೆ ತುದಿಗೆ ಬಂದು ಕೂತ ಇಬ್ಬನಿ
ಅರೆಕ್ಷಣದಲ್ಲಿ ಆಕಾಶದ ನೆತ್ತಿ
ಹತ್ತುತ್ತದೆ

***

ಸೂರ್ಯ ಬೆಳಕು ಕೊಡುತ್ತಾನೆ
ಎಲ್ಲವೂ ನಿಚ್ಚಳವಾಗಿ ತೆರೆದುಕೊಳ್ಳುತ್ತದೆ
ಆದರೆ ನಿಮಗೆ ಗೊತ್ತಿರಲೇ ಬೇಕು
ಕಾಣುವುದೇ ಬೇರೆ, ತೋರುವುದೇ ಬೇರೆ

ಕಾಣುವುದನ್ನ ತೋರಿಸಲಾಗುವುದಿಲ್ಲ
ತೋರಿಸುವುದನ್ನು ಕಾಣಲಾಗುವುದಿಲ್ಲ
ಇದು ಬೆಳಕಿನ ಕರುಣೆ
ದಿಟ್ಟಿ ಬದಲಾಯಿಸಿ ನೋಡಿ,
ಅಷ್ಟೆ.

● **ಸ್ಮಿತಾ ಅಮೃತರಾಜ್**
ಕಲೆ: ಡಿ.ಕೆ. ರಮೇಶ್

